ಉ) ಈ ಕೆಲಸವನ್ನು ಯಾವ ವರ್ಷ ಪೂರ್ಣ ಗೊಳಿಸಲು ನಿರ್ಣಯಿಸಲಾಗಿದೆ

ಊ) ಈ ವರ್ಷದ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣ ಎಷ್ಟು

ಋ) ಕಳೆದ ವರ್ಷ ಈ ಕೆಲಸಕ್ಕೆ ಎಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು ಹಾಗೂ ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಹಣ ವಿಚ್ರ್ಯು ಆಗಿರುವುದು (ವಿವರ ನೀಡುವುದು)?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) 9 ಟಿ.ಎಂ.ಸಿ.

ಆ) ಇಲ್ಲ

ಇ) (ಆ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಉ) ಈ ಯೋಜನೆಯನ್ನು ಪ್ರಾರಂಭಿಸಿದ ನಂತರ ಹಣದ ಲಭ್ಯತೆಯನ್ನು ಅವಲಂಭಿಸಿರುತ್ತದೆ.

ಊ) 1991-92ನೇ ಸಾಲಿನಲ್ಲಿ ಈ ಯೋಜನೆಗೆ ಹಣ ಒದಗಿಸಿರುವುದಿಲ್ಲ.

ಋ) 1990-91ನೇ ಸಾಲಿನಲ್ಲಿ 5 ಲಕ್ಷಗಳನ್ನು ಅನುಧಾನ ನೀಡಿದ್ದು 2.14 ರೂಗಳನ್ನು ಪ್ರಾರಂಭಿಕ ಅನ್ವೇಷಣೆಗಾಗಿ ವೆಚ್ಚ ಮಾಡಲಾಗಿದೆ.

ಚಾಮರಾಜನಗರದಲ್ಲಿ ಕ್ರೀಡಾಂಗಣ ನಿರ್ಮಾಣ

2483-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಚಾಮರಾಜನಗರದಲ್ಲಿ ಒಂದು ಸುಂದರ ಕ್ರೀಡಾಂಗಣವ ಕಟ್ಟಲು ಸರ್ಕಾರ ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಕ್ರೀಡಾಂಗಣ ಕಟ್ಟಲು ನಿರ್ಧರಿಸಲಾಗಿದೆ?

ಶ್ರೀ ಎಸ್ ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು)

ಅ) ಹೌದು

ಆ) ಸೂಕ್ತವಾದ ನಿವೇಶನ ದೊರೆತ ನಂತರ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಪ್ರತಿ ಜಿಲ್ಲೆಯಲ್ಲಿ ವಾರ್ತಾ ಭವನವನ್ನು ನಿರ್ಮಿಸುವುದು

2484- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಪ್ರತಿ ಜಿಲ್ಲೆಯಲ್ಲೂ ವಾರ್ತಾ ಭವನವನ್ನು ಕಟ್ಟಿಸಲು ಸರ್ಕಾರವು ಯೋಚಿಸುತ್ತಿದೆಯೇ

ಅ) ಸಣ್ಣ ಪತ್ರಿಕೆಗಳ ಅಭಿವೃದ್ಧಿಯ ಬಗ್ಗೆ ಎಂ.ಬಿ. ಸಿಂಗ್ ವರದಿಯನ್ನು ಸರ್ಕಾರವು ಜಾರಿಗೊಳಿಸಲು ವಿಳಂಬ ನೀತಿಯನ್ನು ಅನುಸರಿಸುತ್ತಿರುವುದರ ಕಾರಣವೇನು ?

ಕೆ ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ವಾರ್ತಾ ಭವನ ನಿರ್ಮಿಸಲು ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಎಂ.ಬಿ. ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ ಪ್ರಾರಂಭಿಸುವುದು

2485 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳನ್ನು ಎಲ್ಲೆಲ್ಲಿ ಕೈಗೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಮಾಲೂರು ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಯಿಂದ ಮಾರ್ಕಂಡೇಯ ಕೆರೆಯ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತಿರುವುದು ನಿಜವೇ

ಇ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಳಿವೆ. ತಾಲ್ಲೂಕುವಾರು ವಿವರ ಈ ರೀತಿ ಇದೆ.

ಕ್ರ. ಸಂ.	ತಾಲ್ಲೂಕು	ಯೋಜನೆ ಹೆಸರು	ಅಚ್ಚುಕಟ್ಟು (ಹೆಕ್ಟೇರು)
1)	ಮಾಲೂರು	ತೋರಲಕ್ಕಿ ಬಳಿ	40 ಕಾರ್ಯ
2)	ಮಾಲೂರು	ಪೆಮ್ಮದೊಡ್ಡಿ ಬಳಿ	42 ನಿರ್ವಹಿಸು
3)	ಬಂಗಾರಪೇಟೆ	ಮಾರಂಡಹಳ್ಳಿ ಬಳಿ	40 ತ್ತಿವೆ
4)	ಚಿಂತಾಮಣಿ	ಮಿಂಡಿಗಲ ಬಳಿ	ನೀರಿನ ಆಶ್ರಯದ್ಲ
5)	ಚಿಂತಾಮಣಿ	ಎಸಗನಹಳ್ಳಿ ಬಳಿ	ಕೊರತೆಯಿಂದ
6)	ಚಿಂತಾಮಣಿ	ಎನಿಗಬೆಲೆ ವಿದ್ಯಾಪೀಠದ ಬಳಿ	ಕಾರ್ಯ ನಿರ್ವಹಿಸುತ್ತಿಲ್ಲ

ಆ) ನಿಜವಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷರೇ ಕಾವೇರಿ ಜಲವಿವಾದ ವಿಚಾರದಲ್ಲಿ ಹೇಳಿಕೆ ಕೊಟ್ಟ ನಂತರ.....

ಅಧ್ಯಕ್ಷರು : ಮೊದಲು ಇದು ಮುಗಿಯಲಿ.